<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ**. 1769/2021**</u>

ಚಾಸಾ-14 ಫ್ರಾಸಾ-4

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 27-11-2025

| | | |
|---|---|---|
| ಹೆಸರು | : | ಡಾ. ಶಶಿಕುಮಾರ |
| ತಂದೆಯ ಹೆಸರು | : | ಶಿವಯೋಗಿ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ವೈದ್ಯರು |
| ವಾಸಸ್ಥಳ | : | ಧಾರವಾಡ |

-: <u>ಮುಖ್ಯ ವಿಚಾರಣೆ **:-** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ **:-**</u>

2019 ರಿಂದ 2021 ರವರೆಗೆ ನಾನು ಕಲಬುರಗಿಯ ಧನ್ವಂತರಿ ಆಸ್ಪತ್ರೆಯಲ್ಲಿ ವೈದ್ಯರ ಅಡಿಯಲ್ಲಿ ತರಬೇತಿದಾರನಾಗಿ ಕಾರ್ಯನಿರ್ವಹಿಸಿರುತ್ತೇನೆ.

ನಾನು ಒಂದು ದಿನ ಬೆಳಗಿನ ಜಾವ 6-30 ರ ಸುಮಾರಿಗೆ ಮೇಲೆ ತಿಳಿಸಿದ ಆಸ್ಪತ್ರೆಯಲ್ಲಿ ತುರ್ತು ವಿಭಾಗದಲ್ಲಿ ಕರ್ತವ್ಯದಲಿದಾಗ 7-8 ಜನ ಗಾಯಾಳುಗಳನು ಆಸ್ಪತ್ರೆಗೆ ತೆಗೆದುಕೊಂಡು ಬಂದಿರುತ್ತಾರೆ. ಅವರುಗಳಲ್ಲಿ ಆಸ್ಪತ್ರೆಗೆ ಬರುವ ಪೂರ್ವದಲ್ಲಿ ಇಬ್ಬರು ಜನ ತೀರಿಕೊಂಡಿದ್ದರು. ಉಳಿದವರಿಗೆ ಗಾಯಗಳಾಗಿದ್ದು ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ICU ವಾರ್ಡಿಗೆ ಕಳುಹಿಸಿಕೊಟ್ಟಿರುತ್ತೇನೆ.

ಚಾಸಾ 1 ರವರು ದೂರು ಬರೆಯಲು ಅಸಕ್ತರಾಗಿದ್ದರಿಂದ ಸದರಿಯವರು ಹೇಳಿದ ಹೇಳಿಕೆಯನ್ನು ಯಥಾವತ್ತಾಗಿ ಬರೆದು ಪೋಲಿಸರಿಗೆ ನೀಡಿರುತ್ತೇನೆ. ಸದರಿ ಹೇಳಿಕೆ ದೂರಿನ ಪ್ರತಿಯನ್ನು ಸಾಕ್ಷಿಗೆ ತೋರಿಸಿದು ಸಾಕ್ಷಿ ನೋಡಿ ಗುರುತಿಸಿದ್ದು ದೂರನ್ನು ನಿಪಿ **3** ಎಂದು ಸಾಕ್ಷಿ ಸಹಿಯನು ನಿಪಿ **3**(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ **CSH** ವಕೀಲರ ಪರವಾಗಿ **STR** ವಕೀಲರಿಂದಃ**-**

ನಾನು ಯಾವುದೇ ಹೇಳಿಕೆ ಬರೆದುಕೊಂಡಿಲ್ಲ, ನಾನು ಮೇಲೆ ಹೇಳಿದ ದಿನದಂದು ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು

ಅಫಜಲಪೂರ